ನೆರೆತಿತ್ತು. ಪಾರ್ಥನ ಕಪ್ಪು ದಪ್ಪಗಿನ ಗುಂಗುರು ಕೂದಲು ನೋಡಿ, 'ಏ ಮಾರಾಯ, ಸ್ವಲ್ಪವಾದರೂ ಬೂದುಬಣ್ಣ ಹಚ್ಚಿದ್ದರೆ ಏನಾಗುತ್ತಿತ್ತು?' ಎಂದು ಗೆಳೆಯರು ಲೇವಡಿಮಾಡಿದರು. ಆವತ್ತು ರಾತ್ರಿಯ ಊಟವನ್ನು ನಗರದ ಪ್ರಸಿದ್ಧ ಹೋಟೇಲೊಂದರಲ್ಲಿ ಪಾರ್ಥನೇ ವ್ಯವಸ್ಥೆ ಮಾಡಿದ್ದ. ಊಟ ಮುಗಿದು ಎಲ್ಲರೂ ಚದುರಿದ ಮೇಲೂ ಪಾರ್ಥ ಮತ್ತು ಕೆಲವು ಸ್ನೇಹಿತರು ಬಾರಿನಲ್ಲಿ ಕುಳಿತೇ ಇದ್ದರು. ಹಳೆಯ ಗೆಳೆಯರೊಡನೆ ವ್ಹಿಸ್ಕಿಯ ಗ್ಲಾಸುಗಳೆದುರು ಕುಳಿತು ಏನೇನೋ ಹರಟುತ್ತಿದ್ದ ಅವರಿಗೆ ಸಮಯ ಹೋದುದೇ ತಿಳಿದಿರಲಿಲ್ಲ. ಕೆಲಸದ ಒತ್ತಡದಿಂದ ದೂರವಿರುವುದು ಒಂದು ಕಾರಣವಾದರೆ, ಕುಡಿದು ಸಡಿಲಾದ ಮನಃಸ್ಥಿತಿ ಇನ್ನೊಂದು. ಒಬ್ಬೊಬ್ಬರಾಗಿ ಅಲ್ಲಿಂದ ನಿರ್ಗಮಿಸಿದ ಮೇಲೂ ಪಾರ್ಥ ಮತ್ತು ಸುರೇಶ ಅಲ್ಲೇ ಕುಳಿತಿದ್ದರು. ಗ್ಲಾಸುಗಳಲ್ಲಿ ಪ್ರತಿಫಲಿಸುತ್ತಿದ್ದ ದೀಪದ ಬೆಳಕನ್ನು ದಿಟ್ಟಿಸುತ್ತಿದ್ದ ಪಾರ್ಥನ ಕಣ್ಣೆದುರು ಅವನ ತಂದೆಯ ಸೋತ ಕಣ್ಣುಗಳ ಮುಖವು ಇಲ್ಲೇ ತನ್ನೆದುರೇ ಇದೆ ಎಂಬ ಭ್ರಮೆ ಹುಟ್ಟಿಸುವಂತೆ ಕ್ಷಣಮಾತ್ರ ಬಂದು ಮಾಯವಾಯ್ತು. ಇದೇನು ಹೊಸ ಅನುಭವವಲ್ಲ. ಕುಡಿಯಲು ಶುರುಮಾಡುವಾಗ ಇದು ಯಾವಾಗಲೂ ಬಂದು ಮಾಯವಾಗುವ ಮಾನಸಿಕ ದೃಶ್ಯವೇ.



ಬೆಂಗಳೂರಿನಲ್ಲಿ ಕಲಿಯುತ್ತಿದ್ದ ಸಮಯ, ನಾಲ್ಕು ದಿನಗಳ ರಜೆಯೆಂದು ಊರಿಗೆ ಹೊರಟವನು ಮುಸ್ಸಂಜೆಯ ಹೊತ್ತು ಮನೆ ಮುಟ್ಟಿದ್ದ. ಮನೆಪಾಠ ಮುಗಿಸಿ ಹಿಂದಿರುಗಿದ ಅವನ ತಂದೆ ಸುಬ್ರಾಯರು, ಎದುರಿನ ಕುರ್ಚಿಯಲ್ಲಿ ಸ್ವಲ್ಪ ಹೊತ್ತು ಸುಮ್ಮನೆ ಕುಳಿತಿದ್ದು, 'ಬಂದದ್ದ್ ಲಾಯ್ಕಾಯ್ತ್ ಮಾಣಿ,' ಎಂದಷ್ಟೇ ಹೇಳಿದರು. ತಂದೆ-ಮಗನ ಮಾತುಗಳು ಹೆಚ್ಚು ಮುಂದುವರಿದದ್ದು ಕಡಿಮೆಯೇ. ಆದರೆ ಆ ದಿನ ಮೆಲ್ಲಮೆಲ್ಲನೆ ಅವನ ತಂದೆಯ ಮಾತುಗಳು ಹಲವು ವಿಷಯಗಳನ್ನು ಹಾದು ಮುಂದೆ ಸಾಗಿದ್ದುವು. ಹೆಚ್ಚಿನ ವಿಷಯಗಳು ಪಾರ್ಥನಿಗೆ ಗೊತ್ತಿದ್ದದ್ದೇ. ಆದರೆ ಆವತ್ತು ತಂದೆಯ ಸ್ವರದಲ್ಲೇ ಕೇಳಿದ್ದರಿಂದ ಅದಕ್ಕೇನೋ ನಿಜರೂಪ ಬಂದಂತಾಗಿತ್ತು. ಪ್ರತಿಷ್ಠಿತ ಕುಟುಂಬದಲ್ಲಿ ಹುಟ್ಟಿದ ತಪ್ಪಿಗಾಗಿ, ಕೆಲವು ರೀತಿರಿವಾಜುಗಳನ್ನು ಪಾಲಿಸುವುದು ಅಗತ್ಯವಾಗಿತ್ತು. ಕುಟುಂಬದ ಆಸ್ತಿಯು ಹತ್ತು ಹಲವು ಮಂದಿಗಳ ನಡುವೆ ಹಂಚಿಹೋಗಿ, ಅವರ ಪಾಲಿಗೆ ಬಂದಿದ್ದ ತುಣುಕುಗಳಲ್ಲಿ ಒಂದೇ ಒಂದಾದರೂ ಮನೆಯ ಹತ್ತಿರ ಇರಲಿಲ್ಲ. ಮನೆಯಿಂದ ಒಂದರ್ಧ ಗಂಟೆ ಬಸ್ಸಿನ ದಾರಿಯಲ್ಲಿ ಹುಣಸೇಗುಡ್ಡದ ಮೇಲಿದ್ದ ಆ ಜಾಗವು ಸಾಗುವಳಿಗೆ ಯೋಗ್ಯವಾಗಿರಲಿಲ್ಲ. ಕುರುಚಲು ಗಿಡಗಂಟೆ, ಮರಮಟ್ಟುಗಳಿಂದ ತುಂಬಿದ ಹಾಡಿಯೆಂದರೇ ಸಮ. ಉತ್ಪತ್ತಿಗಿಂತ ಖರ್ಚಿನ ಬಾಬತ್ತೇ ಜಾಸ್ತಿ. ತನ್ನ ಮಾಸ್ತರಿಕೆಯ ಸಂಬಳದಲ್ಲಿ ಸಾಲ ಮಾಡದೆ ಮನೆ ನಡೆಸುವುದು ಸಾಧ್ಯವೇ ಇಲ್ಲದ ಪರಿಸ್ಥಿತಿ. ಮುಂದೆ ಮಗಳ ಮದುವೆ, ಉಳಿದಿಬ್ಬರು ತಮ್ಮಂದಿರ ಕಾಲೇಜು – ಇವಕ್ಕೆಲ್ಲ ಹಣ ಎಲ್ಲಿಂದ ಬರಬಹುದು? ಎಂದೆಲ್ಲ ಹೇಳಿದ ಆವರು, ಕೊನೆಗೆ ಹೇಳಬೇಕೆಂದಿದ್ದ ಮುಖ್ಯ ವಿಷಯಕ್ಕೆ ಬಂದಿದ್ದರು. ಈಗ ಅವರ ಸ್ವರ ತೀರ ಸಣ್ಣದಾಗಿತ್ತು.

'ಅಲ್ದನ ಮಾಣಿ, ನೀ ಅಲ್ ಬೆಂಗ್ಳೂರಲ್ ಬ್ಯಾಡ್ದಿದ್ ಹುಡುಗ್ರೊಟ್ಟಿಗೆ ಸೇರ್ಕಂಡ್ ಕುಡಿಯೂಕ್ ಸುರುಮಾಡಿದ್ದಿ ಅಂತ ವರ್ತಮಾನ. ಇದ್ಕ್ ನಾ ಎಂತ ಹೇಳ್ಕೋ ಗೊತ್ತಾತಿಲ್ಲ ಕಾಣ್....' ಎಂದು ಹೇಳಿ ಸೋತ ಕಣ್ಣುಗಳಿಂದ ಅವನನ್ನು ಸ್ವಲ್ಪ ಹೊತ್ತು ದಿಟ್ಟಿಸಿ, ಕಾಲು ತೊಳೆಯಲು ಬಾವಿಕಟ್ಟೆಯ ಕಡೆಗೆ ಹೋಗಿದ್ದರು. ಮೊದಮೊದಲು ಆ ಮುಖ ಪಾರ್ಥನ ಮನಃಪಟಲದಲ್ಲಿ ಹಾದುಹೋದಾಗಲೆಲ್ಲ, ಅವನಿಗೆ